# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 954 |
| ಸದಸ್ಯರ ಹೆಸರು | : | ಶ್ರೀಎಂ. ನಾಗರಾಜು (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ಸಚಿವರು | : | ತೋಟಗಾರಿಕೆ ಹಾಗೂ ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು |
| ಉತ್ತರಿಸಬೇಕಾದ ದಿನಾಂಕ | : | 24-02-2023 |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ತೋಟಗಾರಿಕೆ ಇಲಾಖೆಯ ವತಿಯಿಂದ ನರೇಗಾ ಯೋಜನೆಯಡಿಯಲ್ಲಿ ರೈತರಿಗೆ ಕಲ್ಪಿಸುತ್ತಿರುವ ಸೌಲಭ್ಯಗಳಾವುವು? ಈ ಸೌಲಭ್ಯಗಳನ್ನು ರೈತರಿಗೆ ವಿತರಿಸಲು ಇರುವ ಮಾನದಂಡಗಳೇನು; ಕಳೆದ 3 ವರ್ಷಗಳಲ್ಲಿ ನರೇಗಾ ಯೋಜನೆಯಡಿಯಲ್ಲಿ ಎಷ್ಟು ರೈತರಿಗೆ ಸೌಲಭ್ಯವನ್ನು ಕಲ್ಪಿಸಲಾಗಿದೆ? (ಜಿಲ್ಲಾವಾರು ವಿವರವನ್ನು ನೀಡುವುದು) | ರಾಜ್ಯದಲ್ಲಿ ತೋಟಗಾರಿಕೆ ಇಲಾಖೆಯ ವತಿಯಿಂದ 2022-23 ನೇ ಸಾಲಿನಲ್ಲಿ ನರೇಗಾ ಯೋಜನೆಯಡಿ ರೈತರಿಗೆ ಈ ಕೆಳಕಾಣಿಸಿದ ಸೌಲಭ್ಯಗಳನ್ನು ಕಲ್ಪಿಸಲಾಗಿದೆ.<br>1. ಬಹು ವಾರ್ಷಿಕ ಬೆಳೆಗಳ ಹೊಸ ತೋಟಗಳ ಅಭಿವೃದ್ಧಿ<br>2. ಸಾರ್ವಜನಿಕ/ ವ್ಯಕ್ತಿಗತ ಫಲಾನುಭವಿಗಳ ಸ್ಥಳಗಳಲ್ಲಿ ಪೋಷಕಾಂಶ ತೋಟಗಳ ಸ್ಥಾಪನೆ.<br><br>ಈ ಸೌಲಭ್ಯಗಳನ್ನು ಪಡೆಯಲು ರೈತರು ಈ ಕೆಳಗಿನ ಮಾನದಂಡಗಳನ್ನು ಹೊಂದಿರಬೇಕಾರುತ್ತದೆ.<br>A. ರೈತ ಫಲಾನುಭವಿಯು ಉದ್ಯೋಗ ಚೀಟಿ ಹೊಂದಿರಬೇಕು.<br>B. ಉದ್ಯೋಗ ಚೀಟಿ ಹೊಂದಿರುವ ಕುಟುಂಬಗಳ ಕನಿಷ್ಟ ಒಬ್ಬ ಸದಸ್ಯರು ತಮ್ಮ ಜಮೀನಿನಲ್ಲಿ ಕೆಲಸ ನಿರ್ವಹಿಸಲು ಸಿದ್ದರಿರಬೇಕು.<br>C. ಫಲಾನುಭವಿಯು ಈ ಕೆಳಕಂಡ ಪ್ರವರ್ಗಗಳಿಗೆ ಸೇರಿರಬೇಕು.<br>1. ಪರಿಶಿಷ್ಟ ಜಾತಿ 2. ಪರಿಶಿಷ್ಟ ಪಂಗಡ 3.ಅಲೆಮಾರಿ ಜನಗಳು<br>4. ಪ್ರಕಟಣೆಯಿಂದ ತೆಗೆದಹಾಕಿದ ಬುಡಕಟ್ಟು ಜನಾಂಗದವರು<br>5. ಬಡತನ ರೇಖೆ ಕೆಳಮಟ್ಟದಲ್ಲಿ ಇರುವ ಇತರೆ ಕುಟುಂಬಗಳು<br>6. ಸ್ತ್ರೀ ಪ್ರಧಾನ ಕುಟುಂಬಗಳು<br>7. ವಿಕಲಚೇತನ ಪ್ರಧಾನ ಕುಟುಂಬಗಳು<br>8. ಭೂಸುಧಾರಣಾ ಫಲಾನುಭವಿಗಳು<br>9. ಇಂದಿರಾ ಆವಾಜ್ ಯೋಜನೆಯ ಫಲಾನುಭವಿಗಳು<br>10. ಅನುಸೂಚಿತ ಬುಡಕಟ್ಟುಗಳ ಮತ್ತು ಇತರೆ ಪಾರಂಪರಿಕ ಅರಣ್ಯ ವಾಸಿಗಳ ಅರಣ್ಯ ಹಕ್ಕುಗಳನ್ನು ಮಾನ್ಯ ಮಾಡುವ ಅಧಿನಿಯಮ 2006 (2007ರ 2) ಮತ್ತು ಮೇಲಿನ ಪ್ರವರ್ಗಗಳಡಿ ಅರ್ಹಫಲಾನುಭವಿಗಳು ಪೂರ್ಣವಾದ ನಂತರ ಕೃಷಿಋಣ ಮನ್ನಾ ಮತ್ತು ಋಣ ಪರಿಹಾರ ಯೋಜನೆ 2008 ರಲ್ಲಿ ವಿವರಿಸಿದಂತೆ ಹಾಗೂ ಉದ್ಯೋಗ ಚೀಟಿ ಹೊಂದಿರುವ ಕುಟುಂಬಗಳ ಕನಿಷ್ಟ ಒಬ್ಬ ಸದಸ್ಯರು ತಮ್ಮ ಜಮೀನಿನಲ್ಲಿ ಅಥವಾ ತೋಟದಲ್ಲಿ ಕೈಗೊಳ್ಳುವ |

| | | |
|---|---|---|
| | | ಕಾಮಗಾರಿಯಲ್ಲಿ ಕೆಲಸ ಮಾಡಲು ಇಚ್ಛಿಸುವ ಷರತ್ತಿಗೆ ಒಳಪಟ್ಟಿರುವ ಸಣ್ಣ ಮತ್ತು ಅತಿ ಸಣ್ಣ ರೈತರು<br><br>ಕಳೆದ 3 ವರ್ಷಗಳಲ್ಲಿ ಒಟ್ಟು 166709 ರೈತರಿಗೆ ನರೇಗಾ ಯೋಜನೆಯಡಿ ಸೌಲಭ್ಯವನ್ನು ಕಲ್ಪಿಸಲಾಗಿದೆ. ಜಿಲ್ಲಾವಾರು ವಿವರವನ್ನು **ಅನುಬಂಧ-1** ರಲ್ಲಿ ನೀಡಲಾಗಿದೆ. |
| ಆ) | ತೋಟಗಳಲ್ಲಿ ಮಣ್ಣು ಸಂರಕ್ಷಣೆ ಕಾಮಗಾರಿಯನ್ನು ಉತ್ತೇಜಿಸಲು ಇಲಾಖೆವತಿಯಿಂದ ಹಮ್ಮಿಕೊಂಡಿರುವ ಕಾರ್ಯಕ್ರಮಗಳೇನು? (ವಿವರ ನೀಡುವುದು) | ತೋಟಗಾರಿಕೆ ಇಲಾಖೆ ವತಿಯಿಂದ ಮಣ್ಣು ಸಂರಕ್ಷಣೆಗಾಗಿ ಹಲವಾರು ಉತ್ತೇಜನಕಾರಿ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ಇವುಗಳಲ್ಲಿ ಕೆಲವು ಕ್ರಮಗಳು ಮಣ್ಣು ಸಂರಕ್ಷಣೆ ನಿಟ್ಟಿನಲ್ಲಿ ಪರೋಕ್ಷವಾಗಿ ಹಾಗೂ ಮಣ್ಣಿನ ಆರೋಗ್ಯ ಕಾಪಾಡುವಲ್ಲಿ ನೆರವಾಗುತ್ತದೆ.<br><br>1) ಮಳೆನೀರು ಸಂಗ್ರಹಣಾ ಘಟಕ ನಿರ್ಮಾಣಕ್ಕೆ ಸಹಾಯಧನ:<br><br>ಸಮುದಾಯ ಕೃಷಿ ಹೊಂಡ ಘಟಕ ನಿರ್ಮಾಣಕ್ಕೆ ಉತ್ತೇಜನ ನೀಡುವ ಮೂಲಕ ಮಳೆ ನೀರು ಸಂಗ್ರಹಣೆ ಉದ್ದೇಶದ ಜೊತೆಗೆ ಮಣ್ಣಿನ ಸವಕಳಿ ತಡೆಯುವುದು ಮತ್ತು ಅಂತರ್ಜಲ ಮೂಲಕ್ಕೆ ಮರುಪೂರಣ ವ್ಯವಸ್ಥೆ ಕಲ್ಪಿಸುವ ಉಪಯೋಗವನ್ನು ಸಹ ರೈತರು ಪಡೆಯುತ್ತಿದ್ದಾರೆ. ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಯಡಿ ಕರಿಷ್ಠ6000 ಘ.ಮೀ. ಸಾಮರ್ಥ್ಯದವರೆಗಿನ ಘಟಕಗಳಿಗೆ ಪ್ರತಿ ಘ.ಮೀ.ಗೆ. ರೂ. 66.666/- ರಂತೆ ಗರಿಷ್ಠ ರೂ. 4.00 ಲಕ್ಷ ಹಾಗೂ 8000 ಘ.ಮೀ ಸಾಮರ್ಥ್ಯ ಘಟಕಗಳಿಗೆ ಪ್ರತಿ ಘ.ಮೀ ಗೆ ರೂ.66.666/- ರಂತೆ ಗರಿಷ್ಠ ರೂ.5.32 ಲಕ್ಷದವರೆಗೆ ಸಹಾಯಧನ ಹಾಗೂ ವ್ಯಕ್ತಿಗತ ನೀರು ಸಂಗ್ರಹಣಾ ಘಟಕ ನಿರ್ಮಾಣಕ್ಕೆ ಶೇ. 50 ರಂತೆ 62.50 ಘ.ಮೀ.ಗೆ ಗರಿಷ್ಠ ಒಟ್ಟು ರೂ. 0.75 ಲಕ್ಷಗಳವರೆಗೆ ಪ್ರತಿ ಫಲಾನುಭವಿಗೆ ಸಹಾಯಧನ ನೀಡಲಾಗುತ್ತಿದೆ.<br><br>2) ಮಣ್ಣಿನ ಆರೋಗ್ಯ ನಿರ್ವಹಣೆಗೆ ಅನುಷ್ಠಾನಿಸಲಾಗುತ್ತಿರುವ ಉತ್ತೇಜನಕಾರಿ ಕ್ರಮಗಳು:<br><br>ಮಣ್ಣಿನ ಆರೋಗ್ಯ ನಿರ್ವಹಣೆಗೆ ಪೂರಕ ಪೋಷಕಾಂಶಗಳ ಪೂರೈಕೆ ಮತ್ತು ಸಾವಯವ ಪರಿವರ್ತನೆ ಪ್ರಮುಖ ಪಾತ್ರವಹಿಸುತ್ತವೆ. ಈ ಹಿನ್ನೆಲೆಯಲ್ಲಿ, ಮಣ್ಣಿಗೆ ಸಮಗ್ರ ಪೋಷಕಾಂಶಗಳ ಪೂರೈಕೆಗೆ ಮತ್ತು ಕೃಷಿ ಜಮೀನಿನ ಸಾವಯವ ಪರಿವರ್ತನೆಗೆ ಉತ್ತೇಜನಕಾರಿ ಕ್ರಮಗಳನ್ನು ಇಲಾಖೆವತಿಯಿಂದ ಅನುಷ್ಠಾನಿಸಲಾಗುತ್ತಿದೆ.<br><br>a) ಸಾವಯವ ಪರಿವರ್ತನೆಗೆ ಸಹಾಯಧನ ಕಾರ್ಯಕ್ರಮಗಳು: ಕೇಂದ್ರ ಪುರಸ್ಕೃತ ಪರಂಪರಾಗತ ಕೃಷಿ ವಿಕಾಸ ಯೋಜನೆಯನ್ನು ಈ ಉದ್ದೇಶಕ್ಕಾಗಿಅನುಷ್ಠಾನಿಸಲಾಗುತ್ತಿದೆ. |

| | | |
|---|---|---|
| | | ಕೃಷಿ ಮತ್ತು ತೋಟಗಾರಿಕೆ ಜಮೀನುಗಳನ್ನು ಗುಚ್ಛ (ಕ್ಲಸ್ಟರ್) ಗಳ ಮಾದರಿಯಲ್ಲಿ ಸಾವಯವವಾಗಿ ಪರಿವರ್ತಿಸಿ, ಸಹಭಾಗಿತ್ವ ಖಾತರಿ ವ್ಯವಸ್ಥೆ (PGS) ಮೂಲಕ ಉತ್ಪನ್ನಗಳನ್ನು ಪ್ರಮಾಣೀಕರಿಸಿ ಮಾರುಕಟ್ಟೆ ಸಂಪರ್ಕವನ್ನು ಒದಗಿಸುವುದು ಯೋಜನೆಯ ಉದ್ದೇಶವಾಗಿರುತ್ತದೆ. ಈ ಯೋಜನೆಯನ್ನು (PKVY) 3 ವರ್ಷಗಳ ಕಾಲ, 2021-22ರಿಂದ 2023-24 ರವರೆಗೆ ತೋಟಗಾರಿಕೆ ಇಲಾಖೆಯಿಂದ ಅನುಷ್ಠಾನಗೊಳಿಸಲಾಗುತ್ತಿದ್ದು, ಒಟ್ಟು 10,000 ಹೆಕ್ಟೇರ್ ಪ್ರದೇಶವನ್ನು ಸಾವಯವವಾಗಿ ಪರಿವರ್ತಿಸಲು ಒಟ್ಟು ರೂ.50.00 ಕೋಟಿ ಮೂರು ವರ್ಷಗಳ ಅವಧಿಗೆ ಯೋಜನೆಯಡಿ ಹಂಚಿಕೆ ಮಾಡಲಾಗಿದೆ. ಯೋಜನೆಯಡಿ ಪ್ರತಿ ಹೆಕ್ಟೇರ್‌ಗೆ 1, 2 ಮತ್ತು 3 ನೇ ವರ್ಷಗಳಲ್ಲಿ ಕ್ರಮವಾಗಿ ರೂ.16,500, 17,000 ಮತ್ತು 16,500 ಸಹಾಯಧನವನ್ನು ನೀಡಲಾಗುವುದು. ಪ್ರತಿ ಫಲಾನುಭವಿಯು ಗರಿಷ್ಠ 2 ಹೆಕ್ಟೇರಿಗೆ ಸಹಾಯಧನ ಪಡೆಯಲು ಅರ್ಹರಾಗಿರುತ್ತಾರೆ.<br>b) **ಮಣ್ಣಿನ ಆರೋಗ್ಯ ನಿರ್ವಹಣೆಗೆ ಕ್ರಮ:** ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಯಡಿ ತೋಟಗಳ ಮಣ್ಣಿನ ಆರೋಗ್ಯ ನಿರ್ವಹಣೆಗಾಗಿ ಸಮಗ್ರ ಪೋಷಕಾಂಶ (INM) ಖರೀದಿಗಾಗಿ ಘಟಕ ವೆಚ್ಚ ರೂ. 4000/- ಗಳಿಗೆ ಶೇ.30 ರಂತೆ ರೂ.1200/-ಗಳಂತೆ ಫಲಾನುಭವಿಗಳಿಗೆ ಗರಿಷ್ಠ 4ಹೆ. ವರೆಗೆ ಸಹಾಯಧನ ನೀಡಲಾಗುತ್ತಿದೆ.<br>c) **ಸಮಗ್ರ ತೋಟಗಾರಿಕೆ ಅಭಿವೃದ್ಧಿಗೆ ಉತ್ತೇಜನ:** ವೈಜ್ಞಾನಿಕ ಮತ್ತು ಸುಸ್ಥಿರ ತಂತ್ರಜ್ಞಾನವನ್ನು ಅಳವಡಿಸಿಕೊಂಡು, ಗುಣಮಟ್ಟದ ಫಸಲು ಪಡೆಯಲು ಅನುವಾಗುವಂತೆ, 2022-23ನೇ ಸಾಲಿನಲ್ಲಿ ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆಯಡಿ ದಾಳಿಂಬೆ, ದ್ರಾಕ್ಷಿ, ನುಗ್ಗೆ ಮತ್ತು ಡ್ರ್ಯಾಗನ್ ಹಣ್ಣು ತೋಟಗಳ ಅಭಿವೃದ್ಧಿಗೆ ಸಹಾಯಧನ ನೀಡಲಾಗುತ್ತಿದೆ.<br>d) **ಜೈವಿಕ ಪರಿಕರಗಳ ಉತ್ಪಾದನೆ ಮತ್ತು ಮಾರಾಟ:** ರಾಜ್ಯದಲ್ಲಿ ಇಲಾಖೆಯ ಒಟ್ಟು 6 ಜೈವಿಕ ಕೇಂದ್ರಗಳಲ್ಲಿ ಜೈವಿಕ ಗೊಬ್ಬರ ಮತ್ತು ಜೈವಿಕ ನಿಯಂತ್ರಕಗಳ ಉತ್ಪಾದನೆ ಮಾಡಲಾಗುತ್ತಿದ್ದು, ಕಡಿಮೆ ದರದಲ್ಲಿ ರೈತರಿಗೆ ಮತ್ತು ಸಾರ್ವಜನಿಕರಿಗೆ ನೀಡಲಾಗುತ್ತಿದೆ. ಅಲ್ಲದೆ, ಜೈವಿಕ ಕೇಂದ್ರಗಳ ಪ್ರಯೋಗಾಲಯಗಳಲ್ಲಿ ಮಣ್ಣು, ನೀರು ಮತ್ತು ಪೋಷಕಾಂಶಗಳ ಪರೀಕ್ಷೆ ಕೈಗೊಂಡು ರೈತರಿಗೆ ಮಣ್ಣಿನ ಆರೋಗ್ಯ ಮತ್ತು ನಿರ್ವಹಣೆ ನಿಟ್ಟಿನಲ್ಲಿ ಮಾಹಿತಿ ಮತ್ತು ಶಿಫಾರಸ್ಸುನೀಡಲಾಗುತ್ತಿದೆ. |
| ಇ) | ರಾಜ್ಯದಲ್ಲಿ ಪ್ರಧಾನಮಂತ್ರಿ ಕೃಷಿ ಸಿಂಚಾಯಿ ಯೋಜನೆಯಡಿಯಲ್ಲಿ ಹನಿ ನೀರಾವರಿಗಾಗಿ ಕಳೆದ ಮೂರು ವರ್ಷಗಳಲ್ಲಿ ತೋಟಗಾರಿಕೆ ಇಲಾಖೆಯಿಂದ ರೈತರಿಗೆ ವಿತರಿಸಿರುವ ಸಹಾಯಧನವೆಷ್ಟು, ಈ ಸಹಾಯಧನವನ್ನು | ರಾಜ್ಯದಲ್ಲಿ ಪ್ರಧಾನಮಂತ್ರಿ ಕೃಷಿಸಿಂಚಾಯಿ ಯೋಜನೆಯಡಿಯಲ್ಲಿ ಹನಿನೀರಾವರಿಗಾಗಿ ಕಳೆದ ಮೂರು ವರ್ಷಗಳಲ್ಲಿಅಂದರೆ, 2019-20, 2020-21 ಮತ್ತು 2021-22ನೇ ಸಾಲಿನಲ್ಲಿ ತೋಟಗಾರಿಕೆ ಇಲಾಖೆಯಿಂದ ಒಟ್ಟಾರೆ ರೂ.1025.2 ಕೋಟಿ ಮೊತ್ತವನ್ನು ರೈತರಿಗೆ |

| | | |
|---|---|---|
| | ವಿತರಿಸಲು ಇರುವ ಮಾನದಂಡಗಳೇನು; ಕಳೆದ ಮೂರು ವರ್ಷಗಳಲ್ಲಿ ಸಹಾಯಧನವನ್ನು ಎಷ್ಟು ರೈತರಿಗೆ ವಿತರಿಸಲಾಗಿದೆ? (ಜಿಲ್ಲಾವಾರು ವಿವರಗಳನ್ನು ನೀಡುವುದು) | ಸಹಾಯಧನವಾಗಿ ವಿತರಿಸಲಾಗಿರುತ್ತದೆ.<br><br>**ಈ ಸಹಾಯಧನವನ್ನು ವಿತರಿಸಲು ಮಾನ ದಂಡಗಳು ಈ ಕೆಳಗಿನಂತಿದೆ.**<br>1. ಫಲಾನುಭವಿಗಳು ರೈತರಾಗಿದ್ದು, ಜಮೀನು ಅವರ ಹೆಸರಿನಲ್ಲಿರಬೇಕು ಹಾಗೂ ತೋಟಗಾರಿಕೆ ಬೆಳೆಗಳನ್ನು ಬೆಳೆಯುವ ರೈತರಾಗಿರಬೇಕು ಅಥವಾ ತೋಟಗಾರಿಕೆ ಬೆಳೆಗಳನ್ನು ಬೆಳೆಯಲು ಉದ್ದೇಶಿಸಿರಬೇಕು.<br>2. ರೈತರ ತಾಕಿನಲ್ಲಿ ನೀರಾವರಿ ಸೌಲಭ್ಯದ ಮೂಲ ಇರಬೇಕು ಹಾಗೂ ಹನಿ/ತುಂತುರು ನೀರಾವರಿಗೆ ಯೋಗ್ಯವಿರುವಂತಹ ನೀರನ್ನು ಹೊಂದಿರಬೇಕು.<br>3. ಹನಿ/ತುಂತುರು ನೀರಾವರಿ ಘಟಕಗಳು ಕಾರ್ಯನಿರ್ವಹಿಸಲು ಅವಶ್ಯವಿರುವ ವಿದ್ಯುಚ್ಛಕ್ತಿ ಅಥವಾ ಇತರೆ ಶಕ್ತಿ ಮೂಲಗಳನ್ನು ಹೊಂದಿರಬೇಕು.<br>4. ತನ್ನ ಸ್ವಂತ ನೀರಾವರಿ ಮೂಲ ಇಲ್ಲದಿದ್ದಲ್ಲಿ ಬೇರೆ ರೈತರಿಂದ ಈ ಸಂಬಂಧ ಒಪ್ಪಿಗೆ ಪತ್ರ ಪಡೆದು ಸಲ್ಲಿಸಬೇಕು.<br>5. ಪ್ರತಿ ಫಲಾನುಭವಿ ಕುಟುಂಬಕ್ಕೆ 5 ಹೆಕ್ಟೇರ್ ಪ್ರದೇಶದವರೆಗೆ ಸಹಾಯಧನ ನೀಡಲಾಗುತ್ತದೆ.<br>6. ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡ ರೈತರಿಗೆ 2.00 ಹೆಕ್ಟೇರ್‌ವರೆಗೆ ಶೇ.90 ರಷ್ಟು ಹಾಗೂ ಇತರ ರೈತರಿಗೆ 2.00 ಹೆಕ್ಟೇರ್‌ವರೆಗೆ ಶೇ.75 ರಷ್ಟು ಮತ್ತು 2.00 ಹೆಕ್ಟೇರ್‌ಮೇಲ್ಪಟ್ಟು 5.00 ಹೆಕ್ಟೇರ್‌ವರೆಗೂ ಶೇ.45 ರಷ್ಟುಸಹಾಯಧನವನ್ನುನೀಡಲಾಗುತ್ತಿದೆ.<br><br>ಕಳೆದ ಮೂರು ವರ್ಷಗಳಲ್ಲಿ ಒಟ್ಟಾರೆ 147813 ರೈತರುಗಳಿಗೆ ಸಹಾಯಧನವನ್ನು ವಿತರಿಸಲಾಗಿರುತ್ತದೆ. ಜಿಲ್ಲಾವಾರು ವಿವರವನ್ನು **ಅನುಬಂಧ-1ರಲ್ಲಿ** ಲಗತ್ತಿಸಿದೆ. |

HORTI 108 HGM 2023

(ಮುನಿರತ್ನ)
ತೋಟಗಾರಿಕೆ ಹಾಗೂ ಯೋಜನೆ, ಕಾರ್ಯಕ್ರಮ
ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು

LCQ-954

**ಅನುಬಂಧ-1**

| ಕ್ರ.ಸಂ | ಜಿಲ್ಲೆ | ನರೇಗಾ ಯೋಜನೆ ಮತ್ತು ಹನಿನೀರಾವರಿ ಯೋಜನೆಯಡಿ (2019-20,2020-21 & 2021-22)ರವರೆಗೆ ಸೌಲಭ್ಯ ಪಡೆದ ರೈತ ಫಲಾನುಭವಿಗಳ ಜಿಲ್ಲಾವಾರು ಸಂಖ್ಯೆ | | | | | | | |
|---|---|---|---|---|---|---|---|---|---|
| | | 2019-20 | | 2020-21 | | 2021-22 | | ಒಟ್ಟು | |
| | | ನರೇಗಾ | ಹನಿನೀರಾವರಿ | ನರೇಗಾ | ಹನಿನೀರಾವರಿ | ನರೇಗಾ | ಹನಿನೀರಾವರಿ | ನರೇಗಾ | ಹನಿನೀರಾವರಿ |
| 1 | ಬಾಗಲಕೋಟೆ | 447 | 1191 | 797 | 1365 | 1205 | 826 | 2449 | 3382 |
| 2 | ಬಳ್ಳಾರಿ | 1307 | 2259 | 2014 | 2388 | 2347 | 1403 | 5668 | 6050 |
| 3 | ಬೆಳಗಾವಿ | 1196 | 1684 | 1721 | 1544 | 1335 | 1669 | 4252 | 4897 |
| 4 | ಬೆಂಗಳೂರು ಗ್ರಾ. | 205 | 999 | 546 | 1172 | 589 | 920 | 1340 | 3091 |
| 5 | ಬೆಂಗಳೂರು ನ. | 70 | 458 | 46 | 334 | 193 | 141 | 309 | 933 |
| 6 | ಬೀದರ್ | 81 | 514 | 182 | 1149 | 250 | 1135 | 513 | 2798 |
| 7 | ಚಾಮರಾಜ ನಗರ | 508 | 913 | 1513 | 1305 | 928 | 942 | 2949 | 3160 |
| 8 | ಚಿಕ್ಕಬಳ್ಳಾಪುರ | 1298 | 1695 | 1848 | 2571 | 2725 | 2512 | 5871 | 6778 |
| 9 | ಚಿಕ್ಕಮಗಳೂರು | 9318 | 2624 | 5562 | 2571 | 5456 | 1762 | 20336 | 6957 |
| 10 | ಚಿತ್ರದುರ್ಗ | 563 | 2762 | 1524 | 3604 | 1414 | 2026 | 3501 | 8392 |
| 11 | ದಕ್ಷಿಣ ಕನ್ನಡ | 288 | 245 | 568 | 422 | 603 | 206 | 1459 | 873 |
| 12 | ದಾವಣಗೆರೆ | 1771 | 4377 | 4226 | 4477 | 4207 | 3653 | 10204 | 12507 |
| 13 | ಧಾರವಾಡ | 53 | 323 | 158 | 331 | 261 | 279 | 472 | 933 |
| 14 | ಗದಗ | 417 | 602 | 579 | 400 | 536 | 373 | 1532 | 1375 |
| 15 | ಹಾಸನ | 2718 | 3895 | 7980 | 3407 | 12992 | 1959 | 23690 | 9261 |
| 16 | ಹಾವೇರಿ | 714 | 2545 | 3629 | 1898 | 3689 | 1461 | 8032 | 5904 |
| 17 | ಕಲಬುರಗಿ | 767 | 1735 | 1289 | 1434 | 2101 | 1198 | 4157 | 4367 |
| 18 | ಕೊಡಗು | 279 | 24 | 238 | 7 | 618 | 3 | 1135 | 34 |
| 19 | ಕೋಲಾರ | 721 | 2014 | 1411 | 2691 | 1726 | 1651 | 3858 | 6356 |
| 20 | ಕೊಪ್ಪಳ | 472 | 3852 | 766 | 2965 | 1531 | 1941 | 2769 | 8758 |
| 21 | ಮಂಡ್ಯ | 505 | 2365 | 1533 | 2263 | 3015 | 1616 | 5053 | 6244 |
| 22 | ಮೈಸೂರು | 2369 | 1892 | 2389 | 3285 | 2684 | 1796 | 7442 | 6973 |
| 23 | ರಾಯಚೂರು | 339 | 1100 | 1011 | 1340 | 1465 | 643 | 2815 | 3083 |
| 24 | ರಾಮನಗರ | 2048 | 2366 | 3800 | 1930 | 5169 | 1490 | 11017 | 5786 |
| 25 | ಶಿವಮೊಗ್ಗ | 318 | 1100 | 1105 | 1291 | 1069 | 1595 | 2492 | 3986 |
| 26 | ತುಮಕೂರು | 1038 | 3917 | 2199 | 4192 | 3577 | 1338 | 6814 | 9447 |
| 27 | ಉಡುಪಿ | 43 | 237 | 544 | 433 | 692 | 78 | 1279 | 748 |
| 28 | ಉತ್ತರ ಕನ್ನಡ | 396 | 473 | 520 | 433 | 820 | 431 | 1736 | 1337 |
| 29 | ವಿಜಯಪುರ | 296 | 3422 | 398 | 5023 | 679 | 2678 | 1373 | 11123 |
| 30 | ಯಾದಗಿರಿ | 116 | 758 | 269 | 568 | 368 | 954 | 753 | 2280 |
| | ಒಟ್ಟು | 30661 | 52341 | 50365 | 56793 | 64244 | 38679 | 145270 | 147813 |

ತೋಟಗಾರಿಕೆ ನಿರ್ದೇಶಕರು